ಸ್ಥಳೀಯ ನಗರಸಭೆ ಅಥವಾ ಮಂಡಲ ಪಂಚಾಯತುಗಳಿಗೆ ನೀಡಿ ಪ್ರಾಧಿಕಾರ ವಸೂಲು ಮಾಡುವ ಶುಲ್ಕವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಪ್ರಾಧಿಕಾರ ತಂಬುವಂತೆಯೇ ತುಂಬುವಂತೆ ಮಾಡಿದಲ್ಲಿ, ಜನರಿಗಾಗುವ ತೊಂದರೆಯೂ ತಪ್ಪೀತು, ಸರ್ಕಾರದ ಬೊಕ್ಕಸವೂ ತುಂಬೀತು–ಈ ವಿಚಾರದಲ್ಲಿ ತುರ್ತು ಗಮನ ಹರಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಚಂದ್ರ ಶೇಖರ್.—ನಗರಾಭಿವೃದ್ಧಿ ಸಚಿವರು.—ಮಾನ್ಯ ಅಧ್ಯಕ್ಷರೇ, ಈ ಉಡುಪಿ ಮತ್ತು ಮಲ್ಪೆ ಯೋಜನಾ ಪ್ರಾಧಿಕಾರದ ಅವಧಿ ಮುಗಿದಿದೆ, ಆದ್ದರಿಂದ ಈ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳನ್ನೇ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ಮುಂದಿನ ಕ್ರಮ ಕೈ ಕೊಳ್ಳುತ್ತೇವೆ. ಈ ವಿಚಾರದಲ್ಲಿ ಏನು ದೂರುಗಳು ಇವೆ, ಅದನ್ನು ತನಿಖೆ ಮಾಡಿಸುತ್ತೇನೆ.

## ೧೧) ಉದಯವಾಣಿ ಪತ್ರಿಕೆಯ ವರದಿಗಾರರಿಗೆ ಆಕ್ರಮಣ ಸಂಭಾವನೆ ನೀಡಿರುವ ಬಗ್ಗೆ ದೂರು.

† ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈ ಸನ್ಮಾನ್ಯ ಸಭೆಯ ಗೌರವಾನ್ವಿತ ಸದಸ್ಯರೊಬ್ಬರು ಉದಯವಾಣಿ ಪತ್ರಿಕೆಯ ಅಧಿವೃತ ವರದಿಗಾರರಾದ ಶ್ರೀ ಈಶ್ವರದೈ ತೋಟ ಅವರಿಗೆ ವಿಧಾನಸಭಾ ಕಾರ್ಯಕಲಾಪಗಳನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡುವ ಸಂದರ್ಭದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳನ್ನು ಪ್ರಾಮುಖ್ಯವಾಗಿ ಪ್ರಚುರಪಡಿಸಿದ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿ ಅದೇ ರೀತಿ ಪ್ರೋತ್ಸಾಹ ಮುಂದುವರಿಸಬೇಕೆಂದು ಐವತ್ತು ರೂಪಾಯಿಗಳ ಆಕ್ರಮಣ ಸಂಭಾವನೆಯನ್ನು ಕೊಡಲು ಯತ್ನಿಸಿದ್ದಾರೆಂಬ ಗುರುತರ ಆಪಾದನೆಯನ್ನು ಈ ವರದಿಗಾರರು ತಮ್ಮಲ್ಲಿ ಆಂದರೆ ಮಾನ್ಯ ಸಭಾಧ್ಯಕ್ಷರಲ್ಲಿ ದೂರು ಸಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಈ ವಿಷಯ ಎಷ್ಟರ ಮಟ್ಟಿಗೆ ಸತ್ಯ ಎಂದು ತಿಳಿದುಕೊಳ್ಳಲು ಜನ ಪ್ರತಿನಿಧಿಗಳಾಗಿ ನಮ್ಮ ಗೌರವವನ್ನು ರಕ್ಷಿಸಿಕೊಳ್ಳುವ ದೃಷ್ಟಿಯಿಂದ ಎಲ್ಲಾ ವಿವರಣೆಗಳನ್ನು ಪಡೆಯಲು ನಾವು ಆತಂಕದಲ್ಲಿದ್ದೇವೆ. ಈ ಸದನದ ಯಾವುದೇ ಒಬ್ಬ ಸದಸ್ಯ ಅಗ್ಗದ ಪ್ರಚಾರಕ್ಕಾಗಿ ತನ್ನ ಕಾರ್ಯವನ್ನು ನಿರ್ವಹಿಸುವುದಿಲ್ಲ. ಈ ರೀತಿಯ ಅಭಿಪ್ರಾಯ ಯಾವುದೇ ಸದಸ್ಯರ ಕಾರ್ಯ ವೈಖರಿಯ ಬಗ್ಗೆ ಹೊಂದಿದ್ದರೆ ಅದು ಅತ್ಯಂತ ದುರದೃಷ್ಟಕರ ಇದಕಿಂತಲೂ ನಾಚಿಗೆ ಗೇಡಿನ ಸಂಗತಿ ಎಂದರೆ, ತಮ್ಮ ಚಟುವಟಿಕೆಗಳ ಬಗ್ಗೆ ಪ್ರಚಾರವನ್ನು ಕೊಡಲು ಮಾಧ್ಯಮದ ವರದಿಗಾರರಿಗೆ ಲಂಚ ಕೊಡುವ ಪ್ರಯತ್ನ ಸದಸ್ಯರಿಂದಲೆ ನಡೆಯುತಂಬ ಆಪಾದನೆ ಬಂದರೆ ಇದು ಅತ್ಯಂತ ಹೀನಕೃತ್ಯ ಮತ್ತು ನಮ್ಮೆಲ್ಲರ ಖಂಡನೆಗೆ ಅರ್ಹ ಕೂಡ. ಸತ್ಯ ಸತ್ಯತೆಯನ್ನು ತಿಳಿದುಕೊಳ್ಳದೆ ಹೆಚ್ಚು ವಿಚಾರಗಳನ್ನು ಪ್ರಸ್ತಾಪ ಮಾಡಲು ನಾವು ಸಿದ್ಧರಿಲ್ಲ. ಆದರೆ ಸಾರ್ವಜನಿಕ ಜೀವನದಲ್ಲಿ ನಮ್ಮ ನಡವಳಿಕೆ ಮಾದರಿಯುಳ್ಳಾಗಿರಬೇಕು ಮತ್ತು ನಮ್ಮ ಮೌಲೀಕರಗಳು ಸಾಮಾನ್ಯ ಜನತೆಯ ನಿರೀಕ್ಷೆ ಮತ್ತು ಆಶೋತ್ತರಗಳಿಗೆ ಸ್ಪಂದಿಸುವಂತಿರಬೇಕು. ಆ ಕಾರಣ ಒಂದು ವೇಳೆ ಈ ರೀತಿಯ ಆಪಾಪದನೆಯನ್ನು ತಮ್ಮ ಕಛೇರಿಗೆ ಂದರೆ ಮಾನ್ಯ ಅಧ್ಯಕ್ಷರ ಕಛೇರಿಗೆ ಯಾರಾದರೂ ಸಲ್ಲಿಸಿದ್ದರೆ ಇದರ ಬಗ್ಗೆ ಎಲ್ಲಾ ವಿವರಗಳನ್ನು ಸದನಕ್ಕೆ ತಿಳಿಸಿ ನಮ್ಮನ್ನು ಜನತೆಯ ದೃಷ್ಟಿಯಲ್ಲಿ ಅನುಮಾನಾಸ್ಪದಗಳಿಗೆ ಎಡೆಕೊಡದ ರೀತಿಯಲ್ಲಿ ಬದುಕುವುದಕ್ಕೆ ನಮ್ಮ ನೆರವಿಕೆ ಬರಬೇಕೆಂದು ವಿನಂತಿ ಮತ್ತು ಈ ಸದನದ ಸನ್ಮಾನ್ಯ ಸದಸ್ಯರ ಗೌರವವನ್ನು ಕಾಪಾಡುವುದು ತಮ್ಮ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಇದರ ಬಗ್ಗೆ ವಿವರಗಳನ್ನು ಸದನಕ್ಕೆ ನೀಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ನಿಯಮ ೨೩ಳಿ ರಲ್ಲಿ ಮಾನ್ಯ ಸದಸ್ಯರು ಏನೂ ಬರೆದು ಕೊಟ್ಟಿದ್ದಾರೆ, ಅಷ್ಟನ್ನು ಮಾತ್ರ ಓದಬೇಕೇ ಹೋರತು, ಅದನ್ನು ಬಿಟ್ಟು ಬೇರೆ ಏನನ್ನಾದರೂ ಹೇಳಬಹುದೇ ?

ಶ್ರೀ ಎಂ. ರಘುಪತಿ.—ಹೌದು, ಅವರು ಈಗ ಏನು ಓದಿ ಹೇಳಿದರೂ, ಅಷ್ಟಕ್ಕೇ ಅವರೂ ಸೀಮಿತವಾಗಿರಬೇಕೇ ಹೊರತು, ಬೇರೆ ಏನನ್ನೂ ಹೇಳುವುದು ಸರಿಯಲ್ಲ.

ಶ್ರೀ ಯು. ಭೂಪತಿ. — ಇವಕ್ಕೆ ಯಾವ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎಂ. ರಘುಪ. — ಇದು ಮಾನ್ಯ ಸ್ಪೀಕರ್‌ರವರಿಗೆ ಸಂಬಂಧಪಟ್ಟಿರುವುದರಿಂದ ಅವರು ಸಭೆಗೆ ಬಂದಮೇಲೆ ಅವರೇ ಇದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ.— ಮಾನ್ಯ ಸಚಿವರಿಗೆ ಸ್ಪೀಕರ್‌ರವರ ಸ್ಥಾನದಲ್ಲಿ ಕುಳಿತುಕೊಂಡು ಉತ್ತರ ಕೊಡತಕ್ಕಂಥಾದ್ದು ಆಗುವುದಿಲ್ಲ. ಇದಕ್ಕೆ ಉತ್ತರ ಕೊಡತಕ್ಕಂಥಾವರು ಅಧ್ಯಕ್ಷರೇ.

ಶ್ರೀ ಎಸ್. ಬಂಗಾರಪ್ಪ.— ನೀವು ಪ್ರಸ್ತಾಪ ಮಾಡಿರತಕ್ಕಂಥಾದ್ದು ಸದನದ ಗೌರವದ ಪ್ರಶ್ನೆ—

ಶ್ರೀ ಸಿ. ಬೈರೇಗೌಡ.— ಉತ್ತರ ಹೇಳಬೇಕಾಗಿರುವುದು ಮಂತ್ರಿಗಳಲ್ಲ, ಅಧ್ಯಕ್ಷರು ಹೇಳಬೇಕು. ಇದಕ್ಕೆ ಮಂತ್ರಿಗಳು ಉತ್ತರ ಹೇಳತಕ್ಕಂಥಾದ್ದಲ್ಲ. ಉತ್ತರ ಅಧ್ಯಕ್ಷರ ಪೀಠದಿಂದ ಬರಬೇಕು. ಅಧ್ಯಕ್ಷ ಸ್ಥಾನದಲ್ಲಿರತಕ್ಕವರು ಉತ್ತರ ಹೇಳಬೇಕೇ ವಿನಹ ಮಂತ್ರಿಗಳಲ್ಲ.

## ೧೨ ಪುತ್ತೂರು ತಾಲ್ಲೂಕಿನಲ್ಲಿ ವಿದ್ಯುತ್ ಸೌಕರ್ಯ ಒದಗಿಸಲು ಹೆಚ್ಚು ವಿದ್ಯುತ್ ಕಂಬಗಳ ಪೂರೈಕೆಗೆ ಒತ್ತಾಯ

ಶ್ರೀ ವಿನಯ ಕುಮಾರ್ ಸೊರಕೆ.— ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ೧೯೮೬–೮೭ನೇ ಸಾಲಿನಲ್ಲಿ ವಿದ್ಯುತ್ ದೀಪ ಯೋಜನೆಯನ್ವಯ ೪೦೦ ಮನೆಗಳಿಗೆ ಎರಡು ಟ್ಯೂಬ್‌ಲೈಟ್ ಒದಗಿಸುವನ್ವಯ ರಾಷ್ಟ್ರೀಕೃತ ಲೀಡ್ ಬ್ಯಾಂಕ್ ಹಾಗೂ ವಿದ್ಯುತ್ ಇಲಾಖೆಯವರು ಆಳವಡಿಸಲು ಕೇಳಲಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣವಾಗಿ ಮನೆಗಳು ಹತ್ತಿರ ಹತ್ತಿರವಾಗಿ ಇಲ್ಲದೆ ಇರುವುದರಿಂದ ಸಾಧ್ಯವಾದಷ್ಟು ಜನತಾ ಕಾಲೋನಿಗಳನ್ನೇ ಆರಿಸಿಕೊಂಡಿದ್ದರೂ ಕೂಡ ವಿದ್ಯುತ್ ಇಲಾಖೆಯವರು ಕೊಟ್ಟಂತಹ ೪೦೦ ಕಂಬಗಳಲ್ಲಿ ೪೮೦ ಮನೆಗಳನ್ನು ಆಳವಡಿಸಿಕೊಳ್ಳಲು ಅಸಾಧ್ಯವಾಗಿದೆ. ಇದರ ಬಗ್ಗೆ ಹೆಚ್ಚಿನ ಬೇಡಿಕೆ ಕಂಡುಬಂದರೂ ರಾಷ್ಟ್ರೀಕೃತ ಬ್ಯಾಂಕ್ ಅವರು ಇದರ ಬಗ್ಗೆ ಹೆಚ್ಚಿನ ಮನೆಗಳಿಗೆ ಆರ್ಥಿಕ ಸಹಾಯ ಕೊಡಲು ಆಸಕ್ತಿ ವಹಿಸಿದ್ದರೂ ವಿದ್ಯುತ್ ಕಂಬದ ಕೊರತೆಯಿಂದ ಬರೀ ೨೮೪ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲು ಸಾಧ್ಯವಾಗಿದೆ. ಈ ಹಿಂದೆ ಸಂಬಂಧಪಟ್ಟ ವಿದ್ಯುತ್ ಮಂತ್ರಿಗಳಿಗೆ ಪತ್ರ ಮೂಲಕ ಮನವಿ ಮಾಡಿದ್ದರೂ ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಮಾನ್ಯ ವಿದ್ಯುತ್ ಮಂತ್ರಿಗಳು ಹೆಚ್ಚಿಗೆ ವಿದ್ಯುತ್ ಕಂಬವನ್ನು ಈ ಯೋಜನೆಯನ್ವಯ ರೂಪಿಸಿಕೊಂಡು ಹೆಚ್ಚಿಗೆ ಜನರಿಗೆ ಈ ಸೌಲಭ್ಯದ ಅನುಕೂಲತೆಯನ್ನು ಸಿಗುವ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ತಮ್ಮ ಮಂಜೂಷಾಂತರ ಮಾನ್ಯ ಮಂತ್ರಿಗಳನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ೧೯೮೬–೮೭ರಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ೪೦೦ ಮನೆಗಳಿಗೆ ೨ ಟ್ಯೂಬ್‌ಲೈಟ್ ಕೊಡಲು ಭಾಗ್ಯಜ್ಯೋತಿ ಯೋಜನೆಯಲ್ಲಿ ಸೇರಿಸಲಾಗಿತ್ತು. ಈ ೪೦೦ ಮನೆಗಳಿಗೆ ವಿದ್ಯುತ್ ಒದಗಿಸಲು ೪೦ ಕಂಬಗಳನ್ನು ಅಂದಾಜು ಪಟ್ಟಿಯಲ್ಲಿ ಮಂಜೂರಾಗಿತ್ತು. ಆದರೆ ಮನೆಗಳು ದೂರ ದೂರ ಇರುವುದರಿಂದ ಈ ಕಂಬಗಳ ಉಪಯೋಗ ಪಡೆದು ೧೯೮೬–೮೭ ರಲ್ಲಿ ೨೬೮ ಮನೆಗಳಿಗೆ ಮಾತ್ರ ಎರಡು ಟ್ಯೂಬ್ ಲೈಟ್ ಒದಗಿಸಲಾಯಿತು. ಉಳಿದ ೧೩೨ ಮನೆಗಳಿಗೆ ಎರಡು ಟ್ಯೂಬ್‌ಲೈಟ್ ಒದಗಿಸಲು ಇನ್ನೂ ೨೦೦ ಕಂಬಗಳು ಬೇಕಾಗಿವೆ. ಈ ೨೦೦ ಹೆಚ್ಚಿನ ಕಂಬಗಳಿಗೆ ಬೇಕಾಗುವ ಹಣವನ್ನು ಕಮರ್ಷಿಯಲ್ ಬ್ಯಾಂಕ್‌ನವರು ಕೊಟ್ಟರೆ ಮಂಡಳಿಯವರು ಇನ್ನು ೨–೩ ತಿಂಗಳಲ್ಲಿ ಉಳಿದ ೧೩೨ ಮನೆಗಳಿಗೆ ಎರಡು ಟ್ಯೂಬ್‌ಲೈಟ್ ದೀಪಗಳನ್ನು ಒದಗಿಸಲಾಗುವುದು.

## ೧೩ ಬೆಂಗಳೂರು ಪುತ್ತೂರು ಮಾರ್ಗದಲ್ಲಿ ರಾತ್ರಿ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವುದು

† ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಕಳೆದ ೬ ತಿಂಗಳುಗಳಿಂದ ಸುಳ್ಯ ತಾಲ್ಲೂಕಿನಲ್ಲಿ ಮಂಗಳೂರು ವಿಭಾಗದ ಪುತ್ತೂರು ಡಿಪೋದಿಂದ ಪುತ್ತೂರು–ಬೆಳ್ಳಾರೆ, ಸುಳ್ಯ, ಮಡಿಕೇರಿ, ಮೈಸೂರು, ಬೆಂಗಳೂರಿಗೆ ಸೆಮಿ ಲಕ್ಷುರಿ ಬಸ್ಸು ಒಂದನ್ನು ಕೆಲವು ವರ್ಷಗಳ ಹಿಂದಿನ ಬೇಡಿಕೆಯಂತೆ ಹೊರಡಿಸಲಾಗಿದೆ. ಪ್ರತಿ ರಾತ್ರಿ ಈ ಬಸ್ಸು ಪುತ್ತೂರಿನಿಂದ ೭–೪೫ಕ್ಕೆ ಬಿಟ್ಟು ಮೇಲೆ ನಮೂದಿಸಿದ ರಸ್ತೆಯಲ್ಲಿ ಬೆಂಗಳೂರು ತಲುಪುವುದು. ಪ್ರತೀ ರಾತ್ರಿ ೧೧–೩೦ಕ್ಕೆ ಬೆಂಗಳೂರಿನಿಂದ ಬಿಟ್ಟು, ಬೆಳಗ್ಗೆ ಪುತ್ತೂರು ತಲುಪುವುದು. ಸದ್ರಿ ಈ ಬಸ್ಸಿಗೆ ಬೆಂಗಳೂರಿನಿಂದ, ಬೆಂಗಳೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋದ ಟಿ.ಸಿ.ಯವರು ಮಂಗಳೂರ